# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ದಿನಾಂಕ:– 01–01–2022 ರಂದು ಬೆಳಗ್ಗೆ:– 11.30 ಗಂಟೆಗೆ ಶ್ರೀ. ಶ್ರೀ ಶಿವಕುಮಾರ ಸ್ವಾಮೀಜಿ ಸಾರ್ವಜನಿಕ ಸೇವಾ ಸಂಕೀರ್ಣ ವಾರ್ಡ್ ಸಂಖ್ಯೆ 126 ಮಾರುತಿಮಂದಿರದಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.**

ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ ಪರಿಣಾಮಕಾರಿಯಾಗಿ ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ ಪಾಲಿಕೆಯ ವಾರ್ಡ್ ಹಂತದಲ್ಲಿ ಸಮಿತಿಗಳನ್ನು ರಚಿಸುವ ಸಲುವಾಗಿ ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಕಛೇರಿ ಆದೇಶದ ಸಂಖ್ಯೆ:ಬಿ12(5)/ಪಿ.ಆರ್/35/2020–21/21–09–2020ರ ಆದೇಶದಂತೆ ನೋಡೆಲ್ ಅಧಿಕಾರಿಯನ್ನಾಗಿ ಶ್ರೀ. ಜಯಶಂಕರ್ ರೆಡ್ಡಿ, ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಸೌಕರ್ಯ, ಮಹದೇವಪುರ ವಿಭಾಗ, ಬಿ.ಬಿ.ಎಂ.ಪಿ ರವರನ್ನು ನೇಮಿಸಲಾಗಿದ್ದು, ಸದರಿ ಆದೇಶದಂತೆ ವಾರ್ಡ್ ಮಟ್ಟದಲ್ಲಿ ಸಾರ್ವಜನಿಕರಿಗೆ ಪ್ರಮುಖವಾದ ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ನಿರ್ವಹಣೆ, ನೀರು ಸರಬರಾಜು ಮತ್ತು ಒಳಚರಂಡಿ ಮತ್ತು ಇನ್ನಿತರ ಕಲ್ಯಾಣ ಕಾರ್ಯಕ್ರಮಗಳಂತಹ ಹಲವಾರು ಸೌಲಭ್ಯಗಳನ್ನು ಪರಿಣಾಮಕಾರಿಯಾಗಿ ಒದಗಿಸುವ ನಿಟ್ಟಿನಲ್ಲಿ ಮತ್ತು ಪಾಲಿಕೆಯ ಹಾಗೂ ಸಾರ್ವಜನಿಕರ ನಡುವೆ ಸಮನ್ವಯ ಸಾದಿಸುವ ನಿಟ್ಟಿನಲ್ಲಿ ಪಾಲಿಕೆಯ ವಾರ್ಡ್ ಹಂತದಲ್ಲಿ ಸಮಿತಿ ಸಭೆಗೆ ಈ ಕೆಳಕಂಡ ಅಧಿಕಾರಿ ವರ್ಗ/ಸದಸ್ಯರು ಮತ್ತು ಸ್ಥಳೀಯ ನಾಗರೀಕರು ಹಾಜರಾಗಿದ್ದರು.

**ಸಭೆಗೆ ಹಾಜರಿದ್ದ ಅಧಿಕಾರಿಗಳು ಮತ್ತು ಸದಸ್ಯರು:–**

| ಕ್ರ. ಸಂ | ಹೆಸರು | ಮೊಬೈಲ್ ಸಂಖ್ಯೆ |
|---|---|---|
| 1 | ನೋಡೆಲ್ ಅಧಿಕಾರಿ: ಶ್ರೀ. ಜಯಶಂಕರ್ ರೆಡ್ಡಿ, ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಸೌಕರ್ಯ, ಮಹದೇವಪುರ ವಿಭಾಗ, ಬಿ.ಬಿ.ಎಂ.ಪಿ. | 9741697632 |
| 2 | ಕಾರ್ಯದರ್ಶಿ ಮತ್ತು ಸಂಚಾಲಕರು<br>ಶ್ರೀ. ರವಿರಾಜ್ ಎಸ್. ಪಿ, ಸಹಾಯಕ ಅಭಿಯಂತರರು, ವಾರ್ಡ್ ನಂ.126 | 9980764000 |
| 3 | ಶ್ರೀ. ತಿಮ್ಮಪ್ಪ, RI- Ward no.126, Maruthimandira. | 9480685657 |
| 4 | ಶ್ರೀ. ಲಕ್ಷ್ಮಿ ನರಸಿಂಹಯ್ಯ, ತೋಟಗಾರಿಕೆ ಅಧಿಕಾರಿ, ಚಂದ್ರಾಬಡಾವಣೆ. | 9845257299 |
| 5 | ಶ್ರೀ. ರಂಗದಾಮಯ್ಯ, ಕಾರ್ಯ ನಿರ್ವಾಹಕರು, ಮಾರುತಿಮಂದಿರ. | 9880376090 |
| 6 | ಶ್ರೀ. ರಾಹುಲ್, AE- BWSSB, ChandraLayout. | 7026266677 |
| 7 | ಶ್ರೀಮತಿ. ಮಾಲತಿ, ಆರೋಗ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಮೂಡಲಪಾಳ್ಯ | 9632112539 |
| 8 | ಶ್ರೀಮತಿ. ಹೇಮಾವತಿ. ಹೆಚ್. ಜಿ, ಹಿರಿಯ ಆರೋಗ್ಯ ಪರಿವೀಕ್ಷಕರು. | 9480484746 |
| 9 | ಶ್ರೀ. ಸಂತೋಷ್ ಕುಮಾರ್, (RWA –PF Layout)- ಸದಸ್ಯರು | 8050741006 |
| 10 | ಶ್ರೀಮತಿ. ರೇವತಿ. ಎಮ್– ಸಾರ್ವಜನಿಕರು | 9632112539 |
| 11 | ಶ್ರೀ. ಶಿವಶಂಕರ್. ಎ. ಎಂ. (RWA – Vinayaka Layout)- ಸದಸ್ಯರು | 9448055204 |
| 12 | ಶ್ರೀ. ಸುಧೀರ್ (RWA – Canarabank Colony)- ಸದಸ್ಯರು | 9035285067 |

*****

ದಿನಾಂಕ: 01-01-2022 ರಂದು ಬೆಳಿಗ್ಗೆ 11.30 ಗಂಟೆಗೆ ನಡೆಸಲಾದ ವಾರ್ಡ್ ಮಟ್ಟದ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಸಂಬಂಧ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿ ಮೊದಲಿಗೆ ಹಾಜರಿದ್ದ, ಅಧ್ಯಕ್ಷರಿಗೆ ಸ್ವಾಗತವನ್ನು ಕೋರುತ್ತಾ ಹಾಗೂ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ ವರ್ಗದವರಿಗೆ ಮತ್ತು ಸ್ಥಳೀಯ ಸದಸ್ಯರು ಮತ್ತು ನಾಗರಿಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

**ಚರ್ಚಿಸಲಾದ ವಿಷಯಗಳ ವಿವರಗಳು:-**

1. ಶ್ರೀ. ಶಿವಶಂಕರ್. ಎ. ಎಂ. (RWA – Vinayaka Layout)- ಸದಸ್ಯರು ರವರು ಮಾತನಾಡುತ್ತಾ,
   - ವಸಂತ. #01, 2ನೇ ಅಡ್ಡರಸ್ತೆ, 4ನೇ ಮುಖ್ಯರಸ್ತೆ, ವಿನಾಯಕ ಬಡಾವಣೆ ಇವರ ಮನೆಯ ಬಳಿ ಅನೈತಿಕ ಚಟುವಟಿಕೆಗಳು ನಡೆಯುತ್ತಿದ್ದು ಇದನ್ನು ನಿಂತ್ರಿಸುವ ಬಗ್ಗೆ ಮತ್ತು ಗುಜರಿ ಅಂಗಡಿಗಳ ಗುಜರಿ ವಸ್ತುಗಳನ್ನು ಮನೆಯ ಬಳಿ ಡಂಪ್ ಮಾಡುತ್ತಿರುವುದನ್ನು ತಡೆಯಲು ತಿಳಿಸಿದರು.
   - ವಿನಾಯಕ ದೇವಸ್ಥಾನ ಬಳಿ ಅಪರಿಚಿತ ವ್ಯಕ್ತಿಗಳು ಆರ್.ಓ. ಪ್ಲಾಂಟ್‌ನ ವಿದ್ಯುತ್ ಸಂಪರ್ಕ ನಿಲುಗಡೆಗೊಳಿಸುತ್ತಿರುವ ಬಗ್ಗೆ ತಿಳಿಸಿದರು.

   **ಕ್ರಮ:** ಆರಕ್ಷಕ ಠಾಣೆ, ಗೋವಿಂದರಾಜನಗರ.

2. ಶ್ರೀ. ಸುಧೀರ್ (RWA – Canarabank Colony)- ಸದಸ್ಯರು ರವರು ಮಾತನಾಡುತ್ತಾ,
   - ಕೆನರಬ್ಯಾಂಕ್ ಕಾಲೋನಿಯ ಅಡ್ಡರಸ್ತೆಯಲ್ಲಿರುವ ಮರಗಳ ಕೊಂಬೆಗಳನ್ನು ತೆರವುಗೊಳಿಸುವ ಬಗ್ಗೆ ಸಭೆಯಲ್ಲಿ ತಿಳಿಸಿದರು.

   **ಕ್ರಮ:** ಅರಣ್ಯ ಅಧಿಕಾರಿ, ಚಂದ್ರಾಬಡಾವಣೆ. (Ph.No: 9845257299)

   - ಮುನಿರಾಜು, ಸಂಖ್ಯೆ.8/11, 4ನೇ ಮುಖ್ಯರಸ್ತೆ, ನಂಜರಸಪ್ಪ ಬಡಾವಣೆ. ಇವರ ಮನೆಯ ಮೇಲಿರುವ ಮೊಬೈಲ್ ಟವರ್ ತೆರವುಗೊಳಿಸುವ ಬಗ್ಗೆ ಸಭೆಯಲ್ಲಿ ತಿಳಿಸಿದರು.

   **ಕ್ರಮ:** ಕಾರ್ಯಪಾಲಕ ಅಭಿಯಂತರರು, ಒ.ಎಫ್.ಸಿ, ಬಿ.ಬಿ.ಎಂ.ಪಿ.

3. ಶ್ರೀ. ಸಂತೋಷ್ ಕುಮಾರ್ (RWA –PF Layout)- ಸದಸ್ಯರು ರವರು ಮಾತನಾಡುತ್ತಾ,
   - ಸುಬ್ಬಣ್ಣ ಗಾರ್ಡನ್ 2ನೇ ಮುಖ್ಯರಸ್ತೆಯಲ್ಲಿರುವ ಬೋರ್‌ವೆಲ್ ದುರಸ್ತಿಪಡಿಸುವ ಬಗ್ಗೆ ತಿಳಿಸಿದರು.
   - ಸುಬ್ಬಣ್ಣ ಗಾರ್ಡನ್ 2ನೇ ಬಿ ಅಡ್ಡರಸ್ತೆಯ ಸ್ಯಾನಿಟರಿ ಲೈನ್ ಸಮಸ್ಯೆಯಿರುವ ಬಗ್ಗೆ ತಿಳಿಸಿ ಇದನ್ನು ದುರಸ್ತಿಪಡಿಸುವ ಬಗ್ಗೆ ತಿಳಿಸಿದರು.

   **ಕ್ರಮ:** ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. (Ph.No: 7026266677)

ಈ ಸಂಬಂಧ ಸೂಕ್ತ ಕ್ರಮ ಕೈಗೊಳ್ಳಲು ಸಂಬಂಧ ಪಟ್ಟ ಇಲಾಖೆಗೆ ತಿಳಿಸಲು ನೊಡೆಲ್ ಅಧಿಕಾರಿಗಳು ಕಾರ್ಯದರ್ಶಿ ಮತ್ತು ಸಂಚಾಲಕರು ವಾರ್ಡ್ ನಂ.126 ರವರಿಗೆ ಸೂಚಿಸಲಾಯಿತು.

ಈ ಮೇಲ್ಕಂಡ ಎಲ್ಲಾ ವಿಷಯಗಳನ್ನು ಹಾಗೂ ಸಮಸ್ಯೆಗಳನ್ನು ಬರುವ ಮುಂದಿನ ಸಭೆಯೊಳಗಾಗಿ ನಿವಾರಣೆ ಮಾಡಿ ಅನುಪಾಲನೆ ವರದಿಯನ್ನು ಸಂಬಂದಪಟ್ಟ ಅಧಿಕಾರಿಗಳು ಕಳುಹಿಸಿಕೊಡಬೇಕಾಗಿ ಈ ಮೂಲಕ ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ ಮತ್ತು ಸಂಚಾಲಕರು
ವಾರ್ಡ್ ಸಂಖ್ಯೆ.126

ವಾರ್ಡ್ ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ.126

ಪ್ರತಿಯನ್ನು:

1) ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2) ಮಾನ್ಯ ವಿಶೇಷ ಆಯುಕ್ತರು (ಯೊಜನೆ) ರವರ ಅವಗಾಹನೆಗೆ ಸಲ್ಲಿಸಿದೆ.
3) ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ಅವಗಾಹನೆಗೆ ಸಲ್ಲಿಸಿದೆ.
4) ಜಂಟಿ ಆಯುಕ್ತರು (ಪಶ್ಚಿಮ) ರವರ ಅವಗಾಹನೆಗೆ ಸಲ್ಲಿಸಿದೆ.
5) ಮುಖ್ಯಅಭಿಯಂತರರು (ಪಶ್ಚಿಮ) ರವರ ಅವಗಾಹನೆಗೆ ಸಲ್ಲಿಸಿದೆ.
6) ಅಧೀಕ್ಷಕ ಅಭಿಯಂತರರು (ಪಶ್ಚಿಮ) ರವರ ಅವಗಾಹನೆಗೆ ಸಲ್ಲಿಸಿದೆ.
7) ಕಾರ್ಯಪಾಲಕ ಅಭಿಯಂತರರು (ಗೋವಿಂದರಾಜನಗರ) ವಿಭಾಗರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.